ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಸಿ-2/ಬಿಇಡಿ/206/11-12(ಭಾಗ-2)

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560012.
ದಿನಾಂಕ: 29-12-2016.

## ಸುತ್ತೋಲೆ

ವಿಷಯ: 2013ನೇ ಸಾಲಿನಲ್ಲಿ ನೇಮಕಗೊಂಡ ಬಿ.ಇಡಿ. ಪದವಿಯನ್ನು ಹೊಂದಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಬಿಇಡಿ ಪದವಿಯನ್ನು ಹೊಂದಲು ಅವಕಾಶ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: 189 ಟಿಪಿಯು 2015 ದಿನಾಂಕ 28-12-2016.

****

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇದ್ದ ಉಪನ್ಯಾಸಕ ಹುದ್ದೆಗಳಲ್ಲಿ 2013ನೇ ಸಾಲಿನಲ್ಲಿ 1763 ಉಪನ್ಯಾಸಕ ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ. ಸದರಿ ನೇಮಕಾತಿಯಲ್ಲಿ ಆಯ್ಕೆಯಾದ ಉಪನ್ಯಾಸಕರುಗಳಲ್ಲಿ ಕೆಲವು ಉಪನ್ಯಾಸಕರು ಬಿ.ಇಡಿ. ಪದವಿಯನ್ನು ಹೊಂದಿರುತ್ತಾರೆ. ಆದರೆ ಕೆಲವು ಉಪನ್ಯಾಸಕರು ಬಿ.ಇಡಿ. ಪದವಿಯನ್ನು ಹೊಂದಿರುವುದಿಲ್ಲ, 2016-17ನೇ ಸಾಲಿನ ಬಿ.ಇಡಿ ಪದವಿಗೆ ಪ್ರವೇಶ ಪಡೆಯುವ ಅವಕಾಶವನ್ನು ವಿಸ್ತರಿಸಿರುವುದರಿಂದ ಬಿ.ಇಡಿ. ಪದವಿಯನ್ನು ಹೊಂದಿರದ ಉಪನ್ಯಾಸಕರು ಆ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಅರ್ಜಿ ಸಲ್ಲಿಸಿ, ಪ್ರವೇಶ ಪಡೆದು ಬಿ.ಇಡಿ. ಪದವಿಯನ್ನು ಹೊಂದಲು ಸರ್ಕಾರವು ಅವಕಾಶ ಕಲ್ಪಿಸಿರುವ ಕುರಿತು ನಿರ್ದೇಶನ ನೀಡಿರುತ್ತದೆ.

2013ರ ಉಪನ್ಯಾಸಕರ ನೇಮಕಾತಿ ಅಧಿಸೂಚನೆಯಲ್ಲಿ ನಿಯಮಾನುಸಾರ 4 ವರ್ಷದೊಳಗೆ ಬಿ.ಇಡಿ. ಪದವಿಯನ್ನು ಪಡೆಯತಕ್ಕದ್ದು ಎಂದು ಷರತ್ತು ವಿಧಿಸಿದೆ. ಅದರನ್ವಯ 4 ವರ್ಷಗಳ ಕಾಲವಕಾಶವು ಜೂನ್ 2017ಕ್ಕೆ ಕೊನೆಗೊಳ್ಳುತ್ತದೆ. ಆದುದರಿಂದ ಇವರನ್ನು 4 ವರ್ಷಗಳು ಪೂರೈಸಿದ ನಂತರ ಕರ್ತವ್ಯದಿಂದ ಬಿಡುಗಡೆ ಮಾಡಬೇಕಾಗುತ್ತದೆ. ಹೀಗಾಗಿ ಬಿ.ಇಡಿ ಪಡೆಯದೇ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಇಂತಹ 733 ಉಪನ್ಯಾಸಕರುಗಳು ಬಿ.ಇಡಿ ಕೋರ್ಸಿಗೆ ಇನ್ನೂ ದಾಖಲಾಗಿ ಪದವಿ ಪಡೆದು ಕೊಳ್ಳಬೇಕಾಗಿರುತ್ತದೆ.

ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು, ಇವರು ಬಿ.ಇಡಿ. ಕೋರ್ಸಿಗೆ ದಾಖಲಾತಿ ಪಡೆದುಕೊಳ್ಳಲು ಅಂತಿಮ ದಿನಾಂಕವನ್ನು ಉನ್ನತ ಶಿಕ್ಷಣ ಇಲಾಖೆ ವಿಸ್ತರಿಸಿದಂತೆ ದಿನಾಂಕ 15-01-2017 ಆಗಿರುತ್ತದೆ. ಆದುದರಿಂದ ಬಿ.ಇಡಿ. ಪದವಿ ಪಡೆಯದ ಉಪನ್ಯಾಸಕರಿಗೆ ಇದೇ ಕೊನೆಯ ಅವಕಾಶವಾಗಿದ್ದು, ಅವರುಗಳು ತಪ್ಪದೇ ಅರ್ಜಿ ಸಲ್ಲಿಸಿ, ಪ್ರವೇಶ ಪಡೆದುಕೊಳ್ಳುವಂತೆ ಸೂಚಿಸಿದೆ.

ಪ್ರೊಬೇಷನ್ ಅವಧಿಯಲ್ಲಿ ವೇತನ ಸಹಿತ ರಜೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳಡಿ ಅವಕಾಶವಿರುವುದಿಲ್ಲ. ಬಿ.ಇಡಿ. ಕೋರ್ಸಿಗೆ ಪ್ರವೇಶ ಪಡೆದು, ಬಿ.ಇಡಿ. ಕೋರ್ಸಿಗೆ ಹಾಜರಾಗುವ ಅವಧಿಯನ್ನು

ಡೈಸ್‌ನಾನ್ (Dies non) ಮತ್ತು ವೇತನ ರಹಿತ ಎಂದು ಪರಿಗಣಿಸಬೇಕಿದೆ. ಆದಾಗ್ಯೂ ಉಪನ್ಯಾಸಕರ ಕೋರಿಕೆಯ ಹಿನ್ನೆಲೆಯಲ್ಲಿ ಬಿ.ಇಡಿ. ಕೋರ್ಸಿನ ಅವಧಿಯಲ್ಲಿ ಈ ಉಪನ್ಯಾಸಕರಿಗೆ ಶಿಷ್ಯ ವೇತನವನ್ನು ಪರಿಗಣಿಸಲಾಗುತ್ತದೆ. 4 ವರ್ಷಗಳ ನಂತರ ಉಪನ್ಯಾಸಕರ ಸೇವೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಮತ್ತು ಅವರಿಗೆ ಸೂಕ್ತ ಶಿಷ್ಯ ವೇತನವನ್ನು ಮಂಜೂರು ಮಾಡುವಂತೆ ಅವರು ದಿನಾಂಕ 15–01–2017ರ ಒಳಗೆ ಬಿ.ಇಡಿ. ಕೋರ್ಸಿಗೆ ಅರ್ಜಿ ಸಲ್ಲಿಸಿ, ಅರ್ಜಿ ಸಲ್ಲಿಸಿದ ದಾಖಲೆಗಳನ್ನು ಮತ್ತು ಈ ಪತ್ರಕ್ಕೆ ಅನುಬಂಧಿಸಿದ ನಮೂನೆಯಲ್ಲಿ ಇಂತಹ ಪ್ರತಿಯೊಬ್ಬ ಉಪನ್ಯಾಸಕರು ಮುಚ್ಚಳಿಕೆ ನೀಡಲು ಸೂಚಿಸಿದೆ.

29/12/16

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ನಿರ್ದೇಶಕರ ಆಪ್ತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು.
2. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು (ಆಡಳಿತ) ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು–ಇವರಿಗೆ ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಪಪೂಶಿಇ, ಮಲ್ಲೇಶ್ವರಂ. ಬೆಂಗಳೂರು–ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.
4. ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ–ತುರ್ತು ಕ್ರಮಕ್ಕಾಗಿ ತಮ್ಮ ಜಿಲ್ಲೆಗೆ ಸಂಬಂಧಿಸಿದ ಉಪನ್ಯಾಸಕರುಗಳ ಮಾಹಿತಿಯನ್ನು ನಿಗದಿತ ಮುಚ್ಚಳಿಕೆ ಪತ್ರಗಳನ್ನು ಕ್ರೋಢೀಕರಿಸಿ, ಈ ಕಚೇರಿಗೆ **"ದಿನಾಂಕ 18–01–2017ರ ಒಳಗಾಗಿ ಡಾ॥ ಡಿ. ಕೆ ಸುಧಾ, ಸಹಾಯಕ ನಿರ್ದೇಶಕರು, ಕೊಠಡಿ ಸಂಖ್ಯೆ: 211, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು."** ಈ ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.
5. ಕಚೇರಿ ಪ್ರತಿ.

ಸಂಖ್ಯೆ: 189 ಟಿಪಿಯು 2015

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 28.12.2016.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಶಿಕ್ಷಣ ಇಲಾಖೆ,
ಬೆಂಗಳೂರು.

J.D (Admin)

29/12/16

ಇವರಿಗೆ,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಕ್ರಾಸ್,
ಬೆಂಗಳೂರು.

ಮಾನ್ಯರೇ,

ವಿಷಯ: 2013ನೇ ಸಾಲಿನಲ್ಲಿ ನೇಮಕಗೊಂಡ ಬಿ.ಇಡಿ. ಪದವಿಯನ್ನು ಹೊಂದಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಬಿ.ಇಡಿ. ಪದವಿಯನ್ನು ಹೊಂದಲು ಅವಕಾಶ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪಪೂಶಿಇ: ಸಿ-2/ಬಿ.ಇಡಿ./206/11-12 (ಭಾಗ-2) ದಿ: 9.11.2015

---

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2013ನೇ ರಲ್ಲಿ ಬಿ.ಇಡಿ. ವಿದ್ಯಾರ್ಹತೆ ಇಲ್ಲದೆ ನೇಮಕಗೊಂಡ ಉಪನ್ಯಾಸಕರ ಪ್ರಕರಣವನ್ನು ಸರ್ಕಾರವು ಪರಿಶೀಲಿಸಿದೆ. ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯು ಗುರುತಿಸಿದಂತೆ 2012ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇಮಕಾತಿಯ ವಿದ್ಯಾರ್ಹತೆಯನ್ನು ಸಡಿಲಿಸಿ ಎನ್.ಸಿ.ಟಿ.ಇ. ನಿಗಧಿಪಡಿಸಿದ ಬಿ.ಇಡಿ. ವಿದ್ಯಾರ್ಹತೆ ಹೊಂದಿಲ್ಲದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿದ್ದು ಮತ್ತು ಇಂತಹ ಆಯ್ಕೆಗೊಂಡ ಅಭ್ಯರ್ಥಿಗಳಿಗೆ 4 ವರ್ಷಗಳ ಕಾಲಾವಕಾಶ ನೀಡಿರುವುದು ಕಾನೂನು ಬಾಹಿರವಾಗಿದೆ.

ಈ 4 ವರ್ಷಗಳ ಕಾಲಾವಕಾಶವು ಜೂನ್ 2017ಕ್ಕೆ ಕೊನೆಗೊಳ್ಳುವುದು. ಇಂತಹ 736 ಉಪನ್ಯಾಸಕರುಗಳು ಬಿ.ಇಡಿ. ಕೋರ್ಸಿಗೆ ಇನ್ನೂ ದಾಖಲಾಗಿ ಪದವಿ ಪಡೆದುಕೊಳ್ಳಬೇಕಿದೆ. ಆದುದರಿಂದ ಇವರನ್ನು 4 ವರ್ಷಗಳು ಪೂರೈಸಿದ ನಂತರ ಕರ್ತವ್ಯದಿಂದ ಬಿಡುಗಡೆ ಮಾಡಬೇಕಿರುತ್ತದೆ.

ಬಿ.ಇಡಿ. ಕೋರ್ಸಿಗೆ ದಾಖಲಾತಿ ಪಡೆದುಕೊಳ್ಳಲು ಅಂತಿಮ ದಿನಾಂಕವನ್ನು ಉನ್ನತ ಶಿಕ್ಷಣ ಇಲಾಖೆ ವಿಸ್ತರಿಸಿದಂತೆ ದಿ: 15.1.2017 ಆಗಿರುತ್ತದೆ. ಆದುದರಿಂದ ಅಂತಹ ಉಪನ್ಯಾಸಕರಿಗೆ ಇದೇ ಕೊನೆಯ ಅವಕಾಶವಾಗಿದ್ದು, ಅವರುಗಳು ತಪ್ಪದೇ ಅರ್ಜಿ ಸಲ್ಲಿಸಿ, ಪ್ರವೇಶ ಪಡದುಕೊಳ್ಳುವಂತೆ ಸೂಚಿಸಬೇಕಿದೆ.

ಪ್ರೋಬೇಷನ್ ಅವಧಿಯಲ್ಲಿ ವೇತನ ಸಹಿತ ರಜೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳಡಿ ಅವಕಾಶವಿರುವುದಿಲ್ಲ. ಬಿ.ಇಡಿ. ಕೋರ್ಸಿಗೆ ಪ್ರವೇಶ ಪಡೆದು ಬಿ.ಇಡಿ. ಕೋರ್ಸಿಗೆ ಹಾಜರಾಗುವ ಅವಧಿಯನ್ನು ಡೈಸ್ ನಾನ್ (Dies non) ಮತ್ತು ವೇತನ ರಹಿತ ಎಂದು ಪರಿಗಣಿಸಬೇಕಿದೆ. ಆದಾಗ್ಯೂ ಉಪನ್ಯಾಸಕರ ಕೋರಿಕೆಯ ಹಿನ್ನೆಲೆಯಲ್ಲಿ ಬಿ.ಇಡಿ ಕೋರ್ಸಿನ ಅವಧಿಯಲ್ಲಿ ಈ ಉಪನ್ಯಾಸಕರಿಗೆ ಸೂಕ್ತ ಶಿಷ್ಯವೇತನವನ್ನು ಪರಿಗಣಿಸಬಹುದಾಗಿದೆ.

4 ವರ್ಷಗಳ ನಂತರ ಉಪನ್ಯಾಸಕರ ಸೇವೆಯನ್ನು ಮುಂದುವರಿಸಲು ಅನುಕೂಲವಾಗುವಂತೆ ಮತ್ತು ಅವರಿಗೆ ಸೂಕ್ತ ಶಿಷ್ಯ ವೇತನವನ್ನು ಮಂಜೂರು ಮಾಡುವಂತೆ ಅವರು ದಿ: 15.1.2017 ರೊಳಗೆ ಬಿ.ಇಡಿ. ಕೋರ್ಸಿಗೆ ಅರ್ಜಿ ಸಲ್ಲಿಸಿ, ಅರ್ಜಿ ಸಲ್ಲಿಸಿದ ದಾಖಲೆಗಳನ್ನು ಮತ್ತು ಈ ಪತ್ರಕ್ಕೆ ಅನುಬಂಧಿಸಿದ ಕರಡು ಪತ್ರದಲ್ಲಿ ಇಂತಹ ಪ್ರತಿಯೊಬ್ಬ ಉಪನ್ಯಾಸಕರು ಮುಚ್ಚಳಿಕೆ ನೀಡಬೇಕೆಂದು ಸೂಚಿಸುವಂತೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

[signature] 28/12/16

(ವಿ. ರಾಮಕೃಷ್ಣಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ,(ಪದವಿ ಪೂರ್ವ ಶಿಕ್ಷಣ)